(೩) ರೈತರ ಭೂಮಿಯನ್ನು ಪಾಲು ಪಟ್ಟಿಯನ್ನು ಮಾಡಿಕೊಡಲು ಗ್ರಾಮ ಲೆಕ್ಕಿಗರಿಗೆ ಅಧಿಕಾರ ನೀಡುವುದು.

ಶ್ರೀ ಬಾಬಾ ಗೌಡ ರುದ್ರಗೌಡ ಪಾಟೀಲ್.—ಮಾನ್ಯ ಅಧ್ಯಕ್ಷರೇ, ರೈತರು ತಮ್ಮ ಭೂಮಿ ಪಾಲುಪಟ್ಟಿ ಮಾಡಿಕೊಳ್ಳಬೇಕಾದಲ್ಲಿ ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ಸ್ಟ್ಯಾಂಪ್ ಡ್ಯೂಟಿ ತುಂಬಿ ಪಾಲು ಪಟ್ಟಿ ಮಾಡಿಕೊಳ್ಳಬೇಕೆಂದು ಕಾನೂನು ಮಾಡಲಾಗಿದೆ. ದುಡ್ಡು ಇಲ್ಲದ ಬಡ ರೈತರು ತಮ್ಮ ಆಸ್ತಿ ಪಾಲುಪಟ್ಟಿ ಮಾಡಿಕೊಂಡು ನೆಮ್ಮದಿಯಿಂದ ಬದುಕುವ ಅವರ ಸ್ವತಂತ್ರವನ್ನೇ ಕಸಿದುಕೊಳ್ಳುವುದು ಅನ್ಯಾಯವಾಗಿದೆ. ಕೂಡಲೇ ಮೊದಲಿನಂತೆ ತಲಾಟಿ ಅಥವಾ ವಿಲೇಜ್ ಅಕೌಂಟೆಂಟ್‌ಗೆ ವರದಿ ಕೊಟ್ಟು ಪಾಲು ಮಾಡಿಕೊಳ್ಳಲು ಅನುಕೂಲ ಮಾಡಿಕೊಡಬೇಕೆಂದು ನಾನು ಮಾನ್ಯ ಕಂದಾಯ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಕೆ. ಶಿವಮೂರ್ತಿ (ಅಬಕಾರಿ ಸಚಿವರು) (ಮಾನ್ಯ ಕಂದಾಯ ಸಚಿವರ ಪರವಾಗಿ).—ಮಾನ್ಯ ಅಧ್ಯಕ್ಷರೇ, ರೈತರು ತಮ್ಮ ಭೂಮಿಯನ್ನು ಪಾಲುಪಟ್ಟಿ ಮಾಡಿಕೊಳ್ಳಬೇಕಾದಲ್ಲಿ ನೋಂದಣಿ ಕಾಯ್ದೆಯ ಪ್ರಕರಣ ೧೭(೧) ಎ ಯಿಂದ ಇ ವರೆಗೆ ಬರುವ ಪತ್ರಗಳನ್ನು ಕಡ್ಡಾಯವಾಗಿ ನೋಂದಣಿ ಮಾಡಬೇಕಾಗಿರುತ್ತದೆ. ಉಪ ನೋಂದಣಿ ಕಛೇರಿಯಲ್ಲಿ ಪಾಲುಪತ್ರವನ್ನು ನೋಂದಣಿ ಮಾಡಿಕೊಳ್ಳುವಂತೆ ಸರ್ಕಾರದಿಂದ ಯಾವುದೇ ನಿರ್ದಿಷ್ಟ ಆದೇಶ ನೀಡಿರುವುದಿಲ್ಲ. ನೋಂದಣಿ ನಿಯಮ ೧೭(೨) (೮) ಪ್ರಕಾರ ಕಂದಾಯ ಅಧಿಕಾರಿಗಳು ಮಾಡುವ ಪಾಲು ವಿಭಾಗ ಪತ್ರಕ್ಕೆ ನಿಯಮ (೧೭) (೧) (ಬ) ಅನ್ವಯಿಸುವುದಿಲ್ಲ.

ರೈತರು ಜಮೀನನ್ನು ರೆವಿನ್ಯೂ ಸೆಟಲ್‌ಮೆಂಟ್ ಮಾಡಿಕೊಳ್ಳುವುದಾದರೆ ವಾರ್ಷಿಕ ಕಂದಾಯದ ೨೫ ರಷ್ಟಕ್ಕೆ ಮುದ್ರಾಂಕ ಶುಲ್ಕ ತೆರಬೇಕಾಗುತ್ತದೆ.

(೪) ಮೂಡಿಗೆರೆ ತಾಲ್ಲೂಕು ಗೌತಹಳ್ಳಿ ಹತ್ತಿರ ಹರಿಯುವ ಹಳ್ಳಕ್ಕೆ ಅಣೆಕಟ್ಟು ಕಟ್ಟುವ ಬಗ್ಗೆ

ಶ್ರೀಮತಿ ಮೋಟಮ್ಮ.—ಮಾನ್ಯ ಅಧ್ಯಕ್ಷರೇ, ಮೂಡಿಗೆರೆ ತಾಲ್ಲೂಕಿನ ಮಾಕೋನಹಳ್ಳಿ ಮಂಡಲ ಪಂಚಾಯ್ತಿಗೆ ಸೇರಿದ ಗೌತಹಳ್ಳಿ ಗ್ರಾಮದ ಪಕ್ಕದಲ್ಲಿ ಹರಿಯುವ ಹಳ್ಳಕ್ಕೆ ಅಣೆಕಟ್ಟು ಕಟ್ಟುವ ಬೇಡಿಕೆ ಬಹಳ ವರ್ಷಗಳಿಂದಿರುತ್ತದೆ. ಈ ಅಣೆಕಟ್ಟಿನಿಂದ ನೂರಾರು ಬಡ ರೈತರಿಗೆ ಸುಮಾರು ೫೦೦ ಎಕರೆ ಮೇಲ್ಪಟ್ಟು ಜಮೀನಿಗೆ ನೀರಾವರಿ ಒದಗಿಸಲಾಗುತ್ತದೆ. ಆದುದರಿಂದ ಗೌತಹಳ್ಳಿಗೆ ಈ ಅಣೆಕಟ್ಟನ್ನು ಕೂಡಲೇ ಮಂಜೂರು ಮಾಡಿಕೊಡುವಂತೆ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು).—ಮೂಡಿಗೆರೆ ತಾಲ್ಲೂಕಿನ ಗೌತಹಳ್ಳಿ ಹಳ್ಳಕ್ಕೆ ಅಣೆಕಟ್ಟುವುದರ ಬೇಡಿಕೆ ಬಗ್ಗೆ ಇದುವರೆಗೂ ಗಮನಕ್ಕೆ ಬಂದಿರುವುದಿಲ್ಲ.

ಈ ವಿಷಯದ ಬಗ್ಗೆ ಪೂರ್ವಭಾವಿ ವರದಿಯನ್ನು ತಯಾರಿಸಿ ವರದಿಯನ್ನು ಸಲ್ಲಿಸಲು ಈಗ ಸಣ್ಣ ನೀರಾವರಿ ಮುಖ್ಯ ಇಂಜಿನಿಯರ್‌ರವರು ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ವಿಭಾಗ, ಹಾಸನರವರಿಗೆ ಸೂಚನೆ ನೀಡಿರುತ್ತಾರೆ. ವರದಿ ಬಂದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

(೫) ಜನಾರೋಗ್ಯ ಇಲಾಖೆಯ ಶಿಲ್ಪ ಕಾರ್ಯ ವಲಯಕ್ಕೆ ಪ್ರತ್ಯೇಕವಾದ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಮಾಡುವ ಬಗ್ಗೆ

ಶ್ರೀ ಮಲ್ಲಾರಗೌಡ ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಜನಾರೋಗ್ಯ ಶಿಲ್ಪ ಕಾರ್ಯ ವಲಯಕ್ಕೆ ಪ್ರತ್ಯೇಕವಾದ ವೃಂದ ಮತ್ತು ನೇಮಕಾತಿ ನಿಯಮಗಳು ಇಲ್ಲದೆ ಇರುವುದರಿಂದ ಕೊಳವೆ ಬಾವಿ ಕೊರೆಯುವ ಇಲಾಖೆಯಲ್ಲಿ ಯಾವುದೇ ಬಡ್ತಿಯಿಲ್ಲದೆ ಸಾಕಷ್ಟು ನೌಕರರು ಒಂದೇ ಹುದ್ದೆಯಲ್ಲಿ ೩೫-೩೪ ವರ್ಷ ಇಲಾಖೆಯಲ್ಲಿ ಕೆಲಸ ಮಾಡಿ ಅದೇ ಹುದ್ದೆಯಲ್ಲಿ ಯಾವುದೇ ಬಡ್ತಿಯಿಲ್ಲದೆ ನಿವೃತ್ತಿ ಹೊಂದಿದ್ದಾರೆ. ಈ ಹಿಂದೆ ಸರ್ಕಾರಕ್ಕೆ ಸಾಕಷ್ಟು ಮನವಿಗಳನ್ನು ಕೊಟ್ಟಿದ್ದು ಸರ್ಕಾರ ಆದಷ್ಟು ಬೇಗ ಜನಾರೋಗ್ಯ ಶಿಲ್ಪ ಕಾರ್ಯ ವಲಯಕ್ಕೆ ಪ್ರತ್ಯೇಕವಾದ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಮಾಡಿಸಿಕೊಡಬೇಕೆಂದು ಇಲಾಖೆಯವರು ಭರವಸೆ ಕೊಟ್ಟಿದ್ದಾರೆ. ಅಲ್ಲದೆ ಕಳೆದ ಜುಲೈ ಅಧಿವೇಶನದಲ್ಲಿಯೂ ಸಹ ಅಂದಿನ ಗ್ರಾಮಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರು ವಿಧಾನ

ಪರಿಷತ್ತಿನಲ್ಲಿ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ ೬೨೯ಕ್ಕೆ ಉತ್ತರಿಸುತ್ತಾ ಇನ್ನು ವಿಷಾದನೀಯವಾದ ವಿಚಾರ. ಇನ್ನೂ ಹೆಚ್ಚಿನ ವಿಳಂಬವಿಲ್ಲದೆ ನಿಯಮಗಳನ್ನು ರಚಿಸಲಾಗುವುದೆಂದು ಆಶ್ವಾಸನೆ ಕೊಟ್ಟಿದ್ದರೂ, ಸದರಿ ನಿಯಮಗಳು ಇನ್ನೂ ಆಗದ ಸ್ಥಿತಿಯಲ್ಲಿ ಇರುವುದರಿಂದ ಆದಷ್ಟು ಬೇಗ ಪ್ರತ್ಯೇಕವಾದ ಪ್ಯಂದ ಮತ್ತು ನೇಮಕಾತಿ ನಿಯಮಗಳನ್ನು ವಿಳಂಬವಿಲ್ಲದೆ ರಚಿಸಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ. ಹಾಗೂ ಈ ಬಗ್ಗೆ ಗ್ರಾಮಾಣಾಭಿವೃದ್ಧಿ ಸಚಿವರು ಹೇಳಿಕೆ ನೀಡಬೇಕೆಂದು ಆಗ್ರಹಪಡಿಸುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.(ಗ್ರಾಮಾಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಅರಣ್ಯ ಸಚಿವರು).—ಮಾನ್ಯ ಅಧ್ಯಕ್ಷರೇ, ಅವರು ಹೇಳಿದ್ದಲ್ಲಾ ನಿಜ. ೧೯೮೩ನೇ ಇಸವಿಯಲ್ಲಿ ಈ ನಿಯಮಾವಳಿಗಳನ್ನು ರೂಪಿಸಬೇಕೆಂದು ಪ್ರಾರಂಭ ಮಾಡಿದರೂ ಇದುವರೆಗೆ ಆಗಿಲ್ಲ. ಈಗ ಕೂಸಿ ಹುತಕ್ಕೆ ಬಂದಿದೆಯೆಂದು ಕೇಳಿದ್ದೇನೆ. ನಾನು ಮಾಡಿಕೊಡುತ್ತೇನೆ.

(೬) ಪ್ರೌಢ ಶಾಲಾ ಶಿಕ್ಷಕರಿಗೆ ಅನುಕೂಲವಾಗುವಂತೆ ಕೇಡರ್ ಮತ್ತು ರೆಕ್ರೂಟ್‌ಮೆಂಟ್ ರೂಲ್ಸ್‌ಗೆ ತಿದ್ದುಪಡಿ ಮಾಡುವುದು

ಶ್ರೀ ಎ. ರುಕ್ಮಯ್ಯ ಪೂಜಾರಿ.—ಮಾನ್ಯ ಅಧ್ಯಕ್ಷರೇ, ಪ್ರೌಢ ಶಾಲಾ ವೃತ್ತಿ ಶಿಕ್ಷಕರು ಪದವಿ ಹಾಗೂ ಬಿ.ಎಡ್. ಪಡೆದವರಿದ್ದು, ಪ್ರಾಥಮಿಕ ಶಾಲಾ ಶಿಕ್ಷಕರ ವೇತನ ಪಡೆಯುತ್ತಿದ್ದು, ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಸಿಗುವ ಸೌಲಭ್ಯಗಳಾದ, ಹೆಚ್ಚಿನ ವೇತನದ ಮುಖ್ಯೋಪಾಧ್ಯಾಯರ ಹುದ್ದೆ, ಪದವೀಧರ ಶಿಕ್ಷಕರಾಗಿ ಮುಂಬಡ್ತಿ, ಹೈದರಾಬಾದ್ ವೇತನ ಶ್ರೇಣಿ ಇವೆಲ್ಲವುಗಳಿಂದ ವಂಚಿತರಾಗಿದ್ದಾರೆ. ೧೯೫೭ರ ಕೇಡರ್ ಮತ್ತು ರಿಕ್ರೂಟ್‌ಮೆಂಟ್‌ಗೆ ಹಲವು ತಿದ್ದುಪಡಿಗಳಾದರೂ ವೃತ್ತಿ ಶಿಕ್ಷಕರಿಗೆ ಅನುಕೂಲವಾಗುವಂತೆ ಯಾಕೆ ತಿದ್ದುಪಡಿ ಮಾಡಬಾರದು? ವಿಶೇಷ ಶಿಕ್ಷಕರೆಂದು ಮೊದಲು ಪರಿಗಣಿಸಿದ ಭಾಷಾ ಪಂಡಿತರು ಈಗ ಪದವೀಧರ ಸಹಾಯಕರಿಗೆ ಸಿಗುವ ಸಂಪೂರ್ಣ ಸವಲತ್ತು ಪಡೆಯುತ್ತಿದ್ದಾರೆ, ಪ್ರಾಥಮಿಕ ಶಾಲೆಗಳ ಸಂಗೀತ ಶಿಕ್ಷಕರಿಗೆ ಪ್ರಾಥಮಿಕ ಶಾಲಾ ಶಿಕ್ಷಕರ ಸಂಪೂರ್ಣ ಸವಲತ್ತು ಸಿಗುತ್ತದೆ. ಆದ್ದರಿಂದ ಪ್ರೌಢಶಾಲಾ ವೃತ್ತಿ ಶಿಕ್ಷಕರಿಗೆ ಕೂಡಾ ಅನುಕೂಲವಾಗುವಂತೆ ಕೇಡರ್ ಮತ್ತು ರಿಕ್ರೂಟ್‌ಮೆಂಟ್ ರೂಲ್ಸ್‌ಗೆ ತಿದ್ದುಪಡಿ ಮಾಡಬೇಕೆಂದು ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಶಿವಣ್ಣ.(ಕಾನೂನು ಸಚಿವರು).—ಇದಕ್ಕೆ ಉತ್ತರವನ್ನು ತರಿಸಿಕೊಡಲಾಗುತ್ತದೆ.

(೭) ವಿಮಾನಂಗಾರಿಕೆಗೆ ನೆರವು

ಶ್ರೀಮತಿ ಮನೋರಮಾ ಮಧ್ವರಾಜ್.—ಮಾನ್ಯ ಅಧ್ಯಕ್ಷರೇ, ಕಡಲಲ್ಲಿ ದಿನವಿಡೀ ತೊಳಲಾಡಿ, ವಿಮಾನುಗಾರಿಕೆಯಿಂದಲೇ ಬದುಕುವ ಬಹು ಮಂದಿ ಬಡವರಿಗೆ ಈ ವರ್ಷ ಮಾತ್ರಷ್ಟು ಕಷ್ಟ. ಒಂದೆಡೆ ಡೀಸಲ್ ಬೆಲೆ ಮೇಲಕ್ಕೆ ನೆಗೆತ, ಇನ್ನೊಂದೆಡೆ ವಿಮಾನಿನ ಬೆಲೆ ಕೆಳಕ್ಕೆ ಕುಸಿತ. ಯಾಂತ್ರಿಕ ದೋಣಿಗೆ ಬೇಕಾಗುವ ಡೀಸಲ್ ಬೆಲೆ ಹೆಚ್ಚಳ ಮಾತ್ರವಲ್ಲ ವಿಮಾನುಗಾರಿಕೆಗೆ ಬೇಕಾದ ಬಲೆ, ರೋಪ್, ಪ್ಲೋಟ್ಸ್ ಮೊದಲಾದ ಪೆಟ್ರೋಲಿಯಂ ಜನ್ಯ ಉತ್ಪನ್ನಗಳ ಬೆಲೆಯೂ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಲಿದೆ. ವಿಮಾನಿನ ಬೆಲೆ ಮಾತ್ರ ವರ್ಷದಿಂದ ವರ್ಷಕ್ಕೆ ಕಡಿಮೆ ಆಗುತ್ತಿದೆ. ಕೇರಳದಲ್ಲಿ ವಿಪುಲ ಯಾಂತ್ರೀಕೃತಿಯಿಂದಾಗಿ ಅಲ್ಲಿ ಕರ್ನಾಟಕದ ವಿಮಾನಿಗೆ ಬೇಡಿಕೆ ಕಡಿಮೆ ಆಗುತ್ತಿದೆ. ರಾಜ್ಯದ ಪ್ರಾಮುಖ್ಯ ಕಸುಬಾದ ವಿಮಾನುಗಾರಿಕೆಗೆ ಪ್ರೋತ್ಸಾಹ ನೀಡುವುದು ಸರ್ಕಾರದ ಆದ್ಯ ಕರ್ತವ್ಯವಾಗಿದ್ದು, ಈ ಕೆಳಗಿನ ಸೂಚನೆಗಳನ್ನು ಶೀಘ್ರ ಕಾರ್ಯಗತಗೊಳಿಸಲು ಸರ್ಕಾರವನ್ನು ಒತ್ತಾಯಿಸುತ್ತೇನೆ.

೧. ವಿಮಾನುಗಾರಿಕೆಗೆ ಉಪಯೋಗಿಸುವ ಡೀಸಲ್‌ಗೆ ಸಾಕಷ್ಟು ಸಬ್ಸಿಡಿ ನೀಡಬೇಕು. ಸಕಾಲದಲ್ಲಿ ವಿಮಾನುಗಾರಿಕೆಗೆ ಬೇಕಾದಷ್ಟು ಡೀಸಲ್ ಒದಗಿಸುವ ವ್ಯವಸ್ಥೆ ಆಗಬೇಕು.

೨. ೫೦ ಅಡಿ ಉದ್ದದ ವರೆಗಿನ ಎಲ್ಲಾ ಯಾಂತ್ರಿಕ ದೋಣಿಗಳಿಗೆ ಕೇಂದ್ರ ಸರ್ಕಾರ ಶೇಕಡಾ ೧೦೦ರಷ್ಟು ಅಬಕಾರಿ ತೆರಿಗೆ ರಿಯಾಯಿತಿ ಘೋಷಿಸಿದ್ದು, ಈ ರಿಯಾಯಿತಿಯಲ್ಲಿ ಶೇಕಡಾ ೮೦ರಷ್ಟು ಕೇಂದ್ರ ಸರ್ಕಾರವೂ ಶೇಕಡಾ ೨೦ರಷ್ಟು ರಾಜ್ಯ ಸರ್ಕಾರವೂ ಭರಿಸಬೇಕಾಗಿದ್ದು, ಈ ಪ್ರಯೋಜನ ಈ ವರ್ಷದಿಂದಲೇ ರಾಜ್ಯದ ವಿಮಾನುಗಾರರಿಗೆ ಸಿಗುವಂತಾಗಬೇಕು.